5395(6292) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಪೋಲೀಸ್ ಸಿಬ್ಬಂದಿಗಳಿಗಾಗಿ ವಸತಿ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸಲಾಗಿದೆಯೇ?

ಆ) ಜಿಲ್ಲಾ ಕೇಂದ್ರಗಳಲ್ಲಿ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಪೋಲೀಸ್ ಸಿಬ್ಬಂದಿಗಳಿಗಾಗಿ ಸರ್ಕಾರ ಒದಗಿಸಿಕೊಟ್ಟ ವಸತಿ ಗೃಹಗಳ ಸಂಖ್ಯೆ ಎಷ್ಟು? ಸಂಪೂರ್ಣ ವಿವರ ಒದಗಿಸುವುದು.

ಇ) ಬೀದರ್ ಜಿಲ್ಲೆಯಲ್ಲಿ ಒಟ್ಟು ಎಷ್ಟು ವಸತಿ ಗೃಹಗಳ ವ್ಯವಸ್ಥೆಯನ್ನು ಪೋಲೀಸ್ ಸಿಬ್ಬಂದಿಗಳಿಗಾಗಿ ಒದಗಿಸಿಕೊಡಲಾಗಿದೆ? ಹಾಗೂ ಸಿಬ್ಬಂದಿ ವರ್ಗದ ಬೇಡಿಕೆಗನುಗುಣವಾಗಿ ಈ ವ್ಯವಸ್ಥೆಯಿದೆಯೇ?

ಈ) ಇಲ್ಲವಾದಲ್ಲಿ ಅತ್ಯಗತ್ಯವಾಗಿರುವ ಪೋಲೀಸ್ ವಸತಿ ಗೃಹಗಳನ್ನು ನಿರ್ಮಾಣ ಮಾಡಿಕೊಟ್ಟು ಅನುಕೂಲ ಮಾಡಿಕೊಡಲಾಗುವುದೇ?

ಉ) ಬಸವಕಲ್ಯಾಣ ಕ್ಷೇತ್ರವ್ಯಾಪ್ತಿಯಲ್ಲಿ ಬರುವ ಪೋಲೀಸ್ ಠಾಣೆಗಳಿಗೆ ವಸತಿಗೃಹ ವ್ಯವಸ್ಥೆಯನ್ನು ಮಾಡಿಕೊಡಲಾಗಿದೆಯೇ?

ಊ) ಪೋಲೀಸ್ ಸಿಬ್ಬಂದಿಯ ಕರ್ತವ್ಯದ ದೃಷ್ಟಿಯಿಂದ ಅವರಿಗೆ ಸೂಕ್ತ ವಸತಿ ಗೃಹಗಳ ವ್ಯವಸ್ಥೆಯನ್ನು ಕಲ್ಪಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಋ) 2004–05 ಮತ್ತು 2005–06ನೇ ಸಾಲಿಗಾಗಿ ಎಷ್ಟು ಹಣವನ್ನು ಪೋಲೀಸ್ ವಸತಿಗೃಹಗಳ ನಿರ್ಮಾಣಕ್ಕಾಗಿ ಕಾಯ್ದಿರಿಸಲಾಗಿದೆ?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು) :

ಅ) ಹೌದು, ಹಾಲಿ ತ್ವರಿತ ವಸತಿ ಯೋಜನೆ–IIರಡಿಯಲ್ಲಿ ವಸತಿ ನಿರ್ಮಾಣ ಕಾರ್ಯ ಅನುಷ್ಠಾನಗೊಳಿಸಲಾಗುತ್ತಿದೆ.

ಆ) ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಒಟ್ಟು 9800 ಹಾಗೂ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ 10,259 ವಸತಿ ಗೃಹಗಳನ್ನು ಪೋಲೀಸ್ ಸಿಬ್ಬಂದಿಗಳಿಗಾಗಿ ಒದಗಿಸಿ ಕೊಡಲಾಗಿದೆ. ವಿವರಗಳನ್ನು ಅನುಬಂಧ "ಅ"ದಲ್ಲಿ ಒದಗಿಸಿದೆ.

ಇ) ಬೀದರ್ ಜಿಲ್ಲೆಯಲ್ಲಿ ಒಟ್ಟು 745 ವಸತಿ ಗೃಹಗಳನ್ನು ಈಗಾಗಲೇ ಒದಗಿಸಲಾಗಿದೆ. ತ್ವರಿತ ವಸತಿ ಯೋಜನೆ–II ರಡಿಯಲ್ಲಿ 57 ವಸತಿ ಗೃಹಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಇವರೆಡನ್ನು ಒಟ್ಟುಗೂಡಿಸಿದಲ್ಲಿ ಶೇಕಡ 51% ಸಿಬ್ಬಂದಿಯವರಿಗೆ ವಸತಿ ಗೃಹ ಒದಗಿಸಿದಂತಾಗಿ ಇದು ಸದ್ಯದ ಪರಿಸ್ಥಿತಿಯಲ್ಲಿ ತೃಪ್ತಿಕರವಾಗಿದೆ.

ಈ) ಅನ್ವಯಿಸುವುದಿಲ್ಲ. ಆದಾಗ್ಯೂ ಉಳಿದ ಸಿಬ್ಬಂದಿಯವರಿಗೆ ಮುಂಬರುವ ವರ್ಷಗಳಲ್ಲಿ ಹಂತ ಹಂತವಾಗಿ ಅನುದಾನದ ಲಭ್ಯತೆಯ ಮೇರೆಗೆ ವಸತಿ ಗೃಹಗಳನ್ನು ಒದಗಿಸಲು ಉದ್ದೇಶಿಸಿದೆ.

ಉ) ಹೌದು, ಮಾಡಿಕೊಡಲಾಗಿದೆ.

ಊ) ಹೌದು. ಮುಂಬರುವ ಆರ್ಥಿಕ ವರ್ಷಗಳಲ್ಲಿ ಹಂತ ಹಂತವಾಗಿ ಸಿಬ್ಬಂದಿಗಳಿಗೆ ವಸತಿ ಗೃಹಗಳನ್ನು ನೀಡುವ ಉದ್ದೇಶ ಇಲಾಖೆಗೆ ಇದೆ.

ಋ) 2004–05 ಮತ್ತು 2005–06ನೇ ಸಾಲಿನಲ್ಲಿ ತ್ವರಿತ ವಸತಿ ಯೋಜನೆ IIರಡಿಯಲ್ಲಿ 2 ವರ್ಷಗಳ ಯೋಜನೆಯಡಿಯಲ್ಲಿ 180 ಕೋಟಿಗಳ ವೆಚ್ಚದಲ್ಲಿ 5000 ವಸತಿ ಗೃಹಗಳನ್ನು ರಾಜ್ಯದ ವಿವಿಧೆಡೆಗಳಲ್ಲಿ ನಿರ್ಮಿಸಲಾಗುತ್ತಿದೆ.

ANNEXURE-A

Sl. No.	Name of the Dist/Unit	1 City/District Hq	Taluk Hq
1	Commissioner of Police, Bangalore	5739	-
2	Commissioner of Police, Mysore	852	-
3	Commissioner of Police, Hubli-Dharwad	528	-
4	S.P. Bangalore	-	826
5	S.P. Tumkur	270	679
6	S.P. Kolar	354	366
7	S.P. K.G.F.	373	26
8	S.P. Mysore	444	286
9	S.P. Chamaraja Nagar	144	215
10	S.P. Hassan	224	224
11	S.P. Kodagu	275	93
12	S.P. Mandya	293	261
13	S.P. Davanagere	439	193
14	S.P.Shimoga	378	667
15	S.P. Bellary	319	226
16	S.P. Chitradurga	212	222
17	S.P. D.K. Mangalore	549	135
18	S.P. U.K. Karwar	373	508
19	S.P. Udupi	220	83
20	S.P. Chickmagalore	225	142
21	S.P. Dharwad	523	207
22	S.P. Haveri	224	367
23	S.P. Gadag	326	215
24	S.P. Belagaum	821	685
25	S.P. Bijapura	150	139
26	Bagalkote	277	217
27	S.P. Gulbarga	790	267
28	S.P. Bidar	273	159
29	S.P. Koppal	229	189
30	S.P. Raichur	556	434

1	2	3	4	5
31	Commandant 1st Btn Bangalore	565		
32	Commandant 2nd Btn Belagaum			576
33	Commandant 3rd Btn Bangalore	554		
34	Commandant 4th Btn Bangalore	497		
35	Commandant 5th Btn Mysore		539	
36	Commandant 6th Btn Gulbarga			386
37	Commandant 7th Btn Mangalore			437
38	Commandant 8th Btn Shimoga			364
39	Commandant 9th Btn Bangalore	399		
40	Commandant 10th Btn Shiggaon			465
	Total	**9,134**	**9,800**	**10,249**

5396(6206) ಶ್ರೀ ಮಾಮನಿ ವಿಶ್ವನಾಥ್ ಕರಬಸಪ್ಪ (ಪರಸಗಡ) : ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಮಲಪ್ರಭಾ ಯೋಜನೆ ಅಚ್ಚುಕಟ್ಟು ಪ್ರದೇಶದಲ್ಲಿರುವ ಏತ ನೀರಾವರಿ ಯೋಜನೆಗಳೆಷ್ಟು?

ಆ) ಏತ ನೀರಾವರಿ ಯೋಜನೆಯ ಮುಖ್ಯ ಕಾಲುವೆಗಳು ಯಾವ ಸಾಲಿನಲ್ಲಿ ನಿರ್ಮಾಣವಾಗಿವೆ?

ಇ) ಈ ಯೋಜನೆಯ ಮುಖ್ಯ ಕಾಲುವೆಗಳ ಪುನರ್ಚೇತನ ಕಾರ್ಯ ಎಷ್ಟು ಕಿಮೀ. ಆಗಿವೆ ಮತ್ತು ಬಾಕಿ ಕಾಮಗಾರಿಯ ವಿವರ ನೀಡುವದು.

ಈ) ಈ ಯೋಜನೆಯ ನೀರಿನ ಸದ್ಭಳಕೆಯಾಗಲು ಮತ್ತು ಕಾಲುವೆಗಳ ಸೋರುವಿಕೆಯನ್ನು ತಡೆಯಲು ಸರಕಾರ ಕೈಕೊಂಡ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು) :

ಅ) ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಮಲಪ್ರಭಾ ಯೋಜನೆಯ ಅಚ್ಚುಕಟ್ಟು ಪ್ರದೇಶದ ಜಲಾಶಯದ ಯೋಜನೆಯ ಅಚ್ಚುಕಟ್ಟು ಪ್ರದೇಶದ ಜಲಾಶಯದ ಹಿನ್ನೀರಿಗೆ ನಿರ್ಮಿಸಲಪಟ್ಟ 10 ಏತ ನೀರಾವರಿ ಯೋಜನೆಗಳಲ್ಲಿ 6 ಮತ್ತು ಮಲಪ್ರಭಾ ಎಡದಂಡೆ ಕಾಲುವೆ ಕಿಮೀ. 8+870 ರಲ್ಲಿ ನಿರ್ಮಿಸಿರುವ ಯರಗಟ್ಟಿ ಏತ ನೀರಾವರಿ ಯೋಜನೆ ಸೇರಿ ಒಟ್ಟು 7 ಏತ ನೀರಾವರಿ ಯೋಜನೆಗಳು ಸವದತ್ತಿ ತಾಲ್ಲೂಕಿನಲ್ಲಿ ಇರುತ್ತವೆ.

ಆ) ಸವದತ್ತಿ ತಾಲ್ಲೂಕಿನ ರೇಣುಕಾ, ಸಿಂಗಾರಕೊಪ್ಪ ಏಣಗಿ–ಹಿಟ್ಟಣಗಿ, ಮಲ್ಲೂರ–ಮಾಟೋಳ್ಳಿ ಮತ್ತು ಹೊಸೂರು–ವಕ್ಕುಂದ ಏತ ನೀರಾವರಿ ಯೋಜನೆಗಳ ಮುಖ್ಯ ಕಾಲುವೆಗಳು 1978, ರಲ್ಲಿ ಬಡ್ಲಿ–ಕಾತ್ರಾಳ ಏತ ನೀರಾವರಿ ಯೋಜನೆಯ ಮುಖ್ಯ ಕಾಲುವೆಯು 1992ರಲ್ಲಿ ಹಾಗೂ ಯರಗಟ್ಟಿ ಏತ ನೀರಾವರಿ ಯೋಜನೆಯ ಮುಖ್ಯ ಕಾಲುವೆಯು 1982 ರಲ್ಲಿ ನಿರ್ಮಿಸಲ್ಪಟ್ಟಿವೆ.